2018 ಕ.ತೀ.ವ 601

**(ಧಾರವಾಡ ಪೀಠ)**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್**

## ಎಂ.ಕೆ.ಆರ್. ಪೌಲ್ಟ್ರಿ ಫಾರಂ –ವಿರುದ್ಧ– ಮೆ॥ ಟೀನಾ ಆಗ್ರೊ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಇತರರು*

**ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 96 ರಡಿಯಲ್ಲಿ ನಿಯತ ಮೊದಲನೇ ಮೇಲ್ಮನವಿ.**

**ಹಣದ ಮರು ವಸೂಲಾತಿಗಾಗಿ ಮೊದಲನೇ ಎದುರುದಾರರು ಮೇಲ್ಮನವಿದಾರರ ವಿರುದ್ಧ ಸಲ್ಲಿಸಿದ ದಾವೆಯನ್ನು ಪುರಸ್ಕರಿಸಿ ಡಿಕ್ರಿ ಮತ್ತು ತೀರ್ಪನ್ನು ಹೊರಡಿಸಿದ ಅಧಿವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸದರಿ ನಿಯತ ಮೊದಲನೇ ಮೇಲ್ಮನವಿ.**

**ಮೇಲ್ಮನವಿದಾರರು ಹೆಚ್ಚುವರಿ ಸಾಕ್ಷಿಯನ್ನು ನೀಡಲು ಉಚ್ಚ ನ್ಯಾಯಾಲಯದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ XLI ಕ್ರಮಾದೇಶ 27 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದು ಸಮಂಜಸವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂತಿರುಗಿಸಿ ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.**

ಅರ್ಜಿದಾರರ ಪರ: ಶ್ರೀ ಹರ್ಷ ದೇಸಾಯಿ, ವಕೀಲರು;

1ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಂ. ಸಂಪತ್ ಕುಮಾರ್ ಮತ್ತು ಶ್ರೀ ಎಸ್. ಶ್ರೀವತ್ಸ, ಹಿರಿಯ ವಕೀಲರು, ಶ್ರೀ ಹರೀಶ್ ಎಸ್ ಮೈಗೂರ್, ವಕೀಲರು ಇವರ ಪರವಾಗಿ

2 ಮತ್ತು 3ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಂ.ಜಿ. ನಾಗನೂರಿ, ವಕೀಲರು.

*ಆರ್.ಎಫ್.ಎ. ಸಂ. 4094/2013 (ಹಣ ವಸೂಲಾತಿ), ದಿನಾಂಕ: 13ನೇ ಮಾರ್ಚ್, 2017.

## ತೀರ್ಪು

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಅಪೀಲುದಾರ–ಪ್ರತಿವಾದಿ ಸಂ.1 ರವರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಹಾಗು ಪ್ರತ್ಯರ್ಜಿದಾರ ಸಂ.1 – ವಾದಿ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಹಿರಿಯ ನ್ಯಾಯವಾದಿ ಶ್ರೀ ಶ್ರೀವತ್ಸ ಎಸ್. ಇವರ ವಾದಗಳನ್ನು ನಾವು ಆಲಿಸಿರುತ್ತೇವೆ.

2. ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

ದಾವೆಯು ಹಣದ ವಸೂಲಿಗೆ ಸಂಬಂಧಸಿದ್ದಾಗಿರುತ್ತದೆ. ಕ್ಲೇಮು ಮಾಡಿದ ಒಟ್ಟು ಮೊಬಲಗು 38,48,761/– ರೂ.ಗಳಾಗಿರುತ್ತವೆ. ವಾದಿಯು ಎಣ್ಣೆ ಬೀಜ ಬೆಳೆಗಾರರು, ವ್ಯಾಪಾರಸ್ಥರಿಂದ ಎಣ್ಣೆ ಬೀಜಗಳನ್ನು ಖರೀದಿಸುವಲ್ಲಿ ನಿರತರಾಗಿದ್ದರೆಂದೂ ಹಾಗು ಎಲ್ಲಾ ರೀತಿಯ ಖಾದ್ಯಯೋಗ್ಯ ಎಣ್ಣೆಯ ಉತ್ಪಾದನೆಗೆ ಸಂಬಂಧಿಸಿದಂತೆ ಅವುಗಳ ಸಂಸ್ಕರಣೆಗೆ ಹಾಗು ಅವುಗಳ ಮಾರಾಟದಲ್ಲಿ ನಿರತರಾಗಿದ್ದರೆಂದೂ ಹೇಳಲಾಗುತ್ತಿದೆ. ಮೊದಲ ಪ್ರತಿವಾದಿಯು, ವಾದಿಯ ಬಳಿ ಆತ ಹೆಚ್ಚಿಸಿದ ಬೆಲೆಗಳನುಸಾರವಾಗಿ ಸೋಯಾ ಇಂಡಿ ಹಾಗು ಸೂರ್ಯಕಾಂತಿ ಇಂಡಿಯನ್ನು ಖರೀದಿಸುತ್ತಿರುತ್ತಾರೆ. ಮೊದಲ ಪ್ರತಿವಾದಿಯು ಪಾಲುದಾರ ಸಂಸ್ಥೆಯಾಗಿದ್ದು, ಪ್ರತಿವಾದಿ ಸಂ.2 ಹಾಗು 3 ಅದೇ ರೀತಿಯದಾಗಿವೆ. ಈ ಮೂರು ಸಂಸ್ಥೆಗಳ ಪಾಲುದಾರರು ನಿಕಟ ಸಂಬಂಧಿಗಳಾಗಿರುತ್ತಾರೆ. ಮೊದಲ ಪ್ರತಿವಾದಿಯು, ವಾದಿಯಿಂದ ಸರಕುಗಳನ್ನು ಖರೀದಿಸಿರುತ್ತಾರೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ದಾವೆಯನ್ನು ಪ್ರತಿವಾದಿ ಸಂ.1 ರವರು ಮಾತ್ರವೇ ಪ್ರಶ್ನಿಸಿರುತ್ತಾರೆ. 2 ಹಾಗು 3ನೇ ಪ್ರತಿವಾದಿಗಳು ಪ್ರತಿನಿಧಿಸಿದ್ದಾಗ್ಯೂ, ಅವರು ಯಾವುದೇ ವಾದಗಳನ್ನು ಸಲ್ಲಿಸಿರುವುದಿಲ್ಲ. ಮೊದಲ ಪ್ರತಿವಾದಿಯು ವಾದ ದೃಢೋಕ್ತಿಗಳನ್ನು ನಿರಾಕರಿಸಿರುತ್ತಾರೆ. ವಾಸ್ತವವಾಗಿ, ಪ್ರತಿವಾದಿಯು ಸರಕುಗಳ ಪೂರೈಕೆಗಳನ್ನು ಸ್ವೀಕರಿಸಲಾಗಿದೆಯೆಂದು ಒಪ್ಪಿಕೊಳ್ಳುವ ಜೊತೆಗೆ, ದಾವೆಯಡಿಯಲ್ಲಿ ಕ್ಲೇಮು ಮಾಡಿದ ಮೊಬಲಗಿಗೆ

ಸಂಬಂಧಿಸಿದಂತೆ ತಗಾದೆ ಮಾಡಿದ ನೋಟೀಸುಗಳ ವಿನಿಮಯವನ್ನು ಒಪ್ಪಿಕೊಂಡು, ಪ್ರತಿವಾದಿಯು ಹೊಣೆಗಾರಿಕೆಯನ್ನು ನಿರ್ವಹಿಸಿರುತ್ತಾನೆಂದು ಹಾಗು ಲೆಕ್ಕಪತ್ರಗಳ ಪುಸ್ತಕಗಳನ್ನು ಒದಗಿಸಲು ವಾದಿಯನ್ನು ಕರೆಯಲಾಗಿರುತ್ತದೆಂದು ಕ್ಲೇಮು ಮಾಡಿರುತ್ತಾನೆ. ಆದಾಗ್ಯೂ, ವಾದಿಯು ಹಾಗೆ ಮಾಡಿರುವುದಿಲ್ಲ. ಪ್ರತಿವಾದಿಗಳು ಸ್ವತಂತ್ರವಾದ ಭೌತಿಕವಸ್ತುಗಳನ್ನು ತೋರಿಸಿದ್ದಾಗ್ಯೂ, ಅವರೆಲ್ಲರೂ ಅದನ್ನು ಮೊದಲ ಪ್ರತಿವಾದಿಯ ವ್ಯವಸ್ಥಾಪನಾ ಪಾಲುದಾರರಿಂದ ನಿರ್ವಹಿಸುತ್ತಿದ್ದು, ಆ ಎಲ್ಲಾ ವ್ಯವಹಾರಗಳು ವಾದಿ ಹಾಗು ಪ್ರತಿವಾದಿಯ ನಡುವೆ 2004ನೇ ವರ್ಷಕ್ಕಿಂತ ಮೊದಲು ನಡೆದಂತಾಗಿವೆ. ಪೂರೈಕೆಗಳು ಸಾಮಾನ್ಯವಾಗಿ 30 ದಿನಗಳ ಮಟ್ಟಿಗಿನ ಸಾಲದ ಆಧಾರದ ಮೇಲೆ ಇರುತ್ತವೆ ಹಾಗು ಸಂದಾಯದಲ್ಲಿನ ಯಾವುದೇ ವಿಳಂಬವು ವರ್ಷಕ್ಕೆ ಶೇ.24 ರಷ್ಟು ದರದ ಬಡ್ಡಿಯನ್ನು ಹೊಂದಿರುತ್ತದೆಂಬುದು ವಾದಿಯ ವಾದವಾಗಿರುತ್ತದೆ.

3. 14.08.2010 ರಿಂದ 15.10.2010ರ ವರೆಗಿನ ನಡುವಿನ ದಿನಗಳಲ್ಲಿ ವಾದಿಯು 12 ದರಪಟ್ಟಿಗಳಡಿಯಲ್ಲಿ ಒಟ್ಟು 28,96,986/– ರೂ.ಗಳ ಒಟ್ಟು ಮೊಬಲಗಿನ ಸರಕುಗಳನ್ನು ಪೂರೈಕೆ ಮಾಡಿದ್ದು, ಈ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಪ್ರತಿವಾದಿಯು 1,34,529/– ರೂ.ಗಳ ಮೊಬಲಗನ್ನು ಸಂದಾಯ ಮಾಡಿದ್ದು, ಉಳಿದ ಮೊಬಲಗನ್ನು ಇತ್ಯರ್ಥಪಡಿಸಲು ಕಾಲಾವಕಾಶವನ್ನು ಕೋರಿದ್ದು, ಪುನಾರಾವರ್ತಿತ ತಗಾದೆಗಳನ್ನು ಮಾಡಿದ್ದಾಗ್ಯೂ ಯಾವುದೇ ಸಂದಾಯವನ್ನು ಮಾಡಲಾಗಿರುವುದಿಲ್ಲವೆಂಬುದನ್ನು ವಾದಪತ್ರದಲ್ಲಿ ಕ್ಲೇಮು ಮಾಡಲಾಗಿರುತ್ತದೆ. ಪ್ರತಿವಾದಿಗಳಾದ 2 ಹಾಗು 3 ರವರುಗಳು, ಅನುಕ್ರಮವಾಗಿ ಮುನಿರಾಬಾದ್ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಚೆಕ್‌ಗಳಲ್ಲಿ 27.12.2010 ರಂದು 15,31,627/– ರೂ.ಗಳ ಹಾಗು 12,30,344/– ರೂ.ಗಳ ಮೊಬಲಗನ್ನು ಬಾಕಿ ಸಂದಾಯಕ್ಕೆ ಸಂಬಂಧಿಸಿದಂತೆ ಭದ್ರತೆಯಂತೆ ವಿತರಿಸಲಾಗಿದ್ದು, ಈ ಎರಡೂ ಚೆಕ್ಕುಗಳನ್ನು ಹಣಕ್ಕಾಗಿ ಸಲ್ಲಿಸಿದಾಗ, ಅವು ಅನರ್ಹಗೊಂಡಿರುತ್ತವೆ. ಈ ಹಿನ್ನಲೆಯಲ್ಲಿ ದಾವೆಯನ್ನು ಸಲ್ಲಿಸಲಾಗಿರುತ್ತದೆ.

4. ಅಧಿವಿಚಾರಣೆಯ ಸಮಯದಲ್ಲಿ, ವಾದಿಯು, ಸಂದಾಯಗಳನ್ನು, ಹೊಣೆಗಾರಿಕೆಯನ್ನು ಯುಕ್ತವಾಗಿ ಒಳಗೊಂಡಂಥ ಅಧಿಕಾವಧಿಗೆ ಮಾಡಲಾಯಿತೆಂದೂ ಹಾಗೂ ನಿರ್ವಹಿಸಲಾದ ಲೆಕ್ಕಪತ್ರಗಳ ಮೇರೆಗೆ ಯಾವುದೇ ಬರಬೇಕಾದ ಮೊಬಲಗು ಇರುವುದಿಲ್ಲವೆಂಬ ಪ್ರತಿವಾದಿಗಳ ಕ್ಲೇಮಿನ ವಿರುದ್ಧವಾಗಿ ನಿಶಾನೆ ಪಿ.125 ರಿಂದ ಪಿ.139 ಗಳಲ್ಲಿನ ದಸ್ತಾವೇಜುಗಳನ್ನು ಗುರುತು ಮಾಡಿ ಹಾಜರುಪಡಿಸಿರುತ್ತಾರೆ. ಅದರಲ್ಲಿ, ವ್ಯವಹಾರವನ್ನು ಪ್ರಚಾರ ಮಾಡುತ್ತಿರುವಂಥ ವಾದಿಯ ಏಜೆಂಟನಿದ್ದು, ಪ್ರತಿವಾದಿ ಸಂ.1 ರಿಂದ ಬಂದ ಸೂಚನೆಗಳ ಮೇಲೆ, ಕಾಲಕಾಲಕ್ಕೆ ಪ್ರತಿವಾದಿ ಸಂ.1 ಮಾಡಿದ ಸಂದಾಯಗಳನ್ನು ಪ್ರತಿವಾದಿ 2 ಹಾಗು 3ರ ಬಾಕಿಯ ವಿರುದ್ಧ ಭಾಗ ಮಾಡಲಾಗಿದೆಯೆಂದೂ ಆದ್ದರಿಂದ, ಅಂಥ ಹೊಂದಾಣಿಕೆಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ, ಪ್ರತಿವಾದಿ ಸಂ.1 ದಾವೆಯಡಿಯಲ್ಲಿ ಕ್ಲೇಮು ಮಾಡಲಾದಂಥ ಮೊಬಲಗಿನ ಬಾಕಿಯಂತೆ ಕಂಡುಬರುತ್ತದೆಂದೂ ನಿಶಾನೆ ಪಿ.125 ರಿಂದ ಪಿ. 139ರವರೆಗೆ ಹಾಜರುಪಡಿಸಿದಂಥವುಗಳಿಂದ ಸುಸ್ಥಾಪಿಸಬೇಕೆಂದು ಕೋರಲಾಗಿರುತ್ತದೆ. ಪ್ರತಿವಾದಿ ಸಂ.1 ಕೇವಲ ಲಿಖಿತ ಹೇಳಿಕೆಯಲ್ಲಿ ಮಾತ್ರ, ಸಂದಾಯಗಳನ್ನು ಪೂರೈಕೆಗಳಿಗೆ ಪ್ರತಿಯಾಗಿ, ಕೆಲವನ್ನು ಮುಂಗಡವಾಗಿ, ಹಾಗು ಮತ್ತೆ ಕೆಲವು ಸರಕುಗಳನ್ನು ಪೂರೈಸಿದ ತರುವಾಯ ಮಾಡಲಾಗಿದೆಯೆಂದೂ, ಮುಂಗಡದಲ್ಲಿ ಮುರಿದುಕೊಂಡ ಕ್ಲೇಮನ್ನು ಕಟ್ಟುನಿಟ್ಟಾಗಿ ಆಯ್ಕೆ ಮಾಡಿಕೊಂಡಿರುವುದಿಲ್ಲವೆಂದು ಕ್ಲೇಮು ಮಾಡಿರುತ್ತಾರೆ. ಆದ್ದರಿಂದ, ಅಧೀನ ನ್ಯಾಯಾಲಯವು, ವಿವಾದವು ದಿನಾಂಕ 17.08.2010 ರಿಂದ 16.10.2010 ದಿನಾಂಕಗಳ ನಡುವೆ ಮಾಡಲಾದ ಪೂರೈಕೆಗಳ ಸಂಬಂಧದಲ್ಲಿದೆಯೆಂಬ ಸಂದರ್ಭಗಳ ಮೇಲೆ ಶೂನ್ಯವನ್ನು ಆಯ್ಕೆ ಮಾಡಿಕೊಂಡಿರುತ್ತದೆ ಹಾಗು ಸಾಮಾನ್ಯವಾಗಿ ಸಂದಾಯಗಳನ್ನು ಒಂದು ಸಂದರ್ಭದ ತರುವಾಯ ಮಾತ್ರ ಸರಬರಾಜುಗಳಿಗೆ ಪ್ರತಿಯಾಗಿ ಮಾಡಬೇಕಾಗಿರುವುದರಿಂದ, 17.08.2010ಕ್ಕೆ ಮೊದಲು ಪ್ರತಿವಾದಿ ಸಂ.1 ಮಾಡಿದ ಯಾವುದೇ ಸಂದಾಯಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತಿರುವುದಿಲ್ಲ. ನಿಶಾನೆ ಪಿ.125 ರಿಂದ 139ರ ವರೆಗಿನ ನಿಶಾನೆಗಳು ಪ್ರತಿವಾದಿ ಸಂ.1 ಈಗಾಗಲೇ ಮಾಡಿದ ಸಂದಾಯಗಳಿಗೆ ಪ್ರತಿಯಾಗಿ ಮಾಡಿದ ಹೊಂದಾಣಿಕೆಗಳೆಂದು ಸೂಚಿಸುವುದರಿಂದ, ಹೊಣೆಗಾರಿಕೆಯನ್ನು

ನಿರ್ವಹಿಸಲಾಗಿದೆಯೆಂದು ಹೇಳಲಾಗುವುದಿಲ್ಲ. ಈ ಕಾರಣದಿಂದ ಅಧಿವಿಚಾರಣಾ ನ್ಯಾಯಾಲಯವು ಮುಂದುವರೆದು, ತದನುಸಾರವಾಗಿ ದಾವೆಯನ್ನು ಡಿಕ್ರಿಮಾಡಿರುತ್ತದೆ. ಇದರಿಂದ, ಈ ಸಂದರ್ಭವನ್ನು ದೋಷಪೂರಿತವಾಗಿ ಭಾವಿಸಿಕೊಳ್ಳಲಾಗಿದೆ ಯೆಂಬುದನ್ನು ನಮಗೆ ಮನದಟ್ಟುಮಾಡಿಸಿದಂತಾಗಿದ್ದು, ಇದು, ಪ್ರಾ.ಸಾ.1, ವಾದಿಗಾಗಲೀ ಇಲ್ಲವೆ ಆತನ ಏಜೆಂಟನಿಗಾಗಲೀ ಅಂದರೆ ಸಾಯಿ ರಾಘವೇಂದ್ರ ಏಜೆನ್ಸೀಸ್‌ಗೆ ಸೂಕ್ತ ಸಂದಾಯಗಳನ್ನು ಮಾಡಲು ಅಂತೆಯೇ ಪ್ರತಿವಾದಿ ಸಂ.1ಕ್ಕೆ ಬದಲಾಗಿ ಪ್ರತಿವಾದಿ ಸಂ.2 ಹಾಗು 3ರ ಲೆಕ್ಕ ಖಾತೆಗೆ ಲಿಖಿತದಲ್ಲಿ ಯಾವುದೇ ಅಧಿಕೃತತೆಯಿರುವುದಿಲ್ಲವೆಂದು ಸುದೀರ್ಘವಾಗಿಯೇ ಹೇಳಿಕೆ ನೀಡಿ ಒಪ್ಪಿಕೊಂಡಿರುತ್ತಾರೆಂದು ನ್ಯಾಯಾಲಯದ ಗಮನಕ್ಕೆ ತಂದಿರುತ್ತದೆ. ಇದರಿಂದ ಹೆಚ್ಚುವರಿ ಸಾಕ್ಷ್ಯವನ್ನು ಹಾಜರುಪಡಿಸಲು ಕೋರಿ ಐ.ಎ.ಸಂ.1/2017ರ ಮೇಲೆ ಈ ನ್ಯಾಯಾಲಯದ ಮುಂದೆ ಈಗ ಸಲ್ಲಿಸಿರುವ ಅರ್ಜಿಯ ಮೇರೆಗೆ ಅಪೀಲುದಾರನ ನಿಲುವನ್ನು ಬಲಪಡಿಸಿರುತ್ತದೆಂಬುದನ್ನು ವಾದಿಸಲೂ ಸಹ ಕೋರಿರುವುದಕ್ಕೆ ಒತ್ತು ನೀಡಲಾಗಿದ್ದು, ಲೆಕ್ಕಪತ್ರಗಳ ವಿವರಪಟ್ಟಿಯ ಪ್ರಕಾರ, 2010–11ನೇ ಲೆಕ್ಕವರ್ಷಕ್ಕೆ ಸಂಬಂಧಿಸಿದ ಪೂರೈಕೆಗಳ ವಿರುದ್ಧ ಪ್ರತಿವಾದಿ ಸಂ.1 ರಿಂದ ಮಾಡಲಾದ ಸಂದಾಯಗಳು ಮಾಡಲಾದ ಪೂರೈಕೆಗಳ ವಿರುದ್ಧ ಯಾವುದೇ ಬಾಕಿಯಿರುವುದಿಲ್ಲವೆಂಬುದನ್ನು ಸೂಚಿಸುತ್ತವೆ. ಆದ್ದರಿಂದ ವಾದಿ ಹಾಗು ಪ್ರತಿವಾದಿ ನಡುವೆ ಸಾಲದ ಆಧಾರದ ಮೇಲೆ, ಬಹಳ ದೀರ್ಘಕಾಲದಿಂದ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ನಡೆಸಲಾಗುತ್ತಿತ್ತೆಂದು ಒಪ್ಪಿಕೊಂಡಿರುವಾಗ ಪೂರೈಕೆಗಳಿಗೆ ಪ್ರತಿಯಾಗಿ ಸಂದಾಯ ಮಾಡಲಾಗಿದೆಯೆಂದು ನಿರೂಪಿಸಲು ಅಪೀಲುದಾರರು ವಿಫಲರಾಗಿರುತ್ತಾರೆಂದು ಅಭಿಪ್ರಾಯಪಟ್ಟು ನ್ಯಾಯಾಲಯವು ತಪ್ಪನ್ನು ಎಸಗಿದೆಯೆಂದೂ, ಲೆಕ್ಕ ಪತ್ರಗಳು ಹೊಂದಾಣಿಕೆಯಾದಲ್ಲಿ, ಅಪೀಲುದಾರನು ವಾದಿಗೆ ಯಾವದೇ ಬಾಕಿ ಮೊಬಲಗನ್ನು ನೀಡಬೇಕಾಗಿರುವುದಿಲ್ಲವೆಂದೂ, ವಾಸ್ತವವಾಗಿ, ಈಗಾಗಲೇ ಕರೆಯಲಾದ ಹೊಣೆಗಾರಿಕೆಗಳ ಮೊತ್ತವನ್ನು ಅಧಿಕವಾಗಿಯೇ ಸಂದಾಯ ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟು ನ್ಯಾಯಾಲಯವು ತಪ್ಪನ್ನು ಮಾಡಿರುತ್ತದೆ.

5. ಈ ಸಂಬಂಧದಲ್ಲಿ, ಅಪೀಲುದಾರನ ಪರ ಮಾನ್ಯ ನ್ಯಾಯವಾದಿಗಳು, ವಿಷಯವನ್ನು ಈ ಆಯಾಮದಲ್ಲಿ ನಿರೂಪಿಸಲು ಹಾಜರುಪಡಿಸಬೇಕೆಂದು ನಾವು ಕೋರಿದ ದಾಖಲೆ ಹಾಗು ಹೆಚ್ಚುವರಿ ದಸ್ತಾವೇಜುಗಳ ಮೂಲಕ ನಮ್ಮ ಗಮನವನ್ನು ಸೆಳೆದಿದ್ದಾರೆ.

6. ಪ್ರತ್ಯರ್ಜಿದಾರ ಸಂ.1ರವರ ಪರ ಮಾನ್ಯ ನ್ಯಾಯವಾದಿಗಳಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್. ಶ್ರೀವತ್ಸರವರು, ಅಪೀಲುದಾರ-ಪ್ರತಿವಾದಿ ಸಂ.1 ರವರು ಪ್ರಸ್ತುತ ನಿರೂಪಿಸಿದ ವಾದಗಳು ಸಂಪೂರ್ಣವಾಗಿ ಅಧಿವಿಚಾರಣಾ ನ್ಯಾಯಾಲಯದ ವಾದ-ವಿವಾದಗಳಿಗೆ ಅಸಮಂಜಸ ವಾದುದಾಗಿರುತ್ತದೆ ಹಾಗೂ ಯಾವುದೇ ಅಂಥ ವಾದವು ಅನುಮತೀಯ ವಾಗಿರುವುದಿಲ್ಲ. ಅಪೀಲುದಾರನನ್ನು ಈ ನ್ಯಾಯಾಲಯದ ಎದುರು ಇಡಿಯಾಗಿ ಹೊಸ ರಕ್ಷಣೆಯನ್ನು ರೂಪಿಸುವುದರಿಂದ ಪ್ರತಿವಾರಿಸಿದೆ. ಅಪೀಲುದಾರನು, ಅಧಿವಿಚಾರಣಾ ನ್ಯಾಯಾಲಯದ ಎದುರು ಈ ವಿಷಯಗಳನ್ನು ಎತ್ತಿರುವುದಿಲ್ಲ ಇಲ್ಲವೇ ಪ್ರತಿಕ್ಲೇಮನ್ನು ಕೋರುವುದಾಗಲೀ ಮಾಡಿರುವುದಿಲ್ಲ ಮತ್ತು ಇವುಗಳ ಗೈರಿನಲ್ಲಿ ಈಗ ಎತ್ತಲಾಗಿರುವ ವಿಷಯಗಳನ್ನು ಕ್ಲೇಮು ಮಾಡುವುದಾಗಲಿ ಮತ್ತು ಇದರಲ್ಲಿ ಕೋರಲಾಗಿರುವ ಒಲ್ಲದ ಮನಸ್ಸಿನ ಪ್ರತಿ ಕ್ಲೇಮು ಸಹಾ ಅನುಮತೀಯವಲ್ಲ. ಅಲ್ಲದೆ ಈತ ಮುಂದುವರೆದು ಪಿ.125 ರಿಂದ 139ರ ವರೆಗಿನ ನಿಶಾನೆಗಳನ್ನು ಬಿಟ್ಟುಬಿಟ್ಟಲ್ಲಿ ಕೂಡ, ಸಂದಾಯಗಳನ್ನು ಸ್ವೀಕರಿಸದಂಥವುಗಳಿಗೆ ಸಂಬಂಧಪಟ್ಟಂತೆ ಪೂರೈಕೆಗಳನ್ನು ಮಾಡಲಾಗಿದೆಯೆಂಬುದು ವಾದಿಯ ನೇರ ವಾದವಾಗಿರುವ ವಾದಿಯ ವಾದದ ತೀವ್ರತೆಯನ್ನು ಕಡಿಮೆಗೊಳಿಸಲಾಗುವುದಿಲ್ಲ. ಸಂದಾಯಗಳನ್ನು ಮಾಡಲಾಗಿದೆಯೆಂದು ಸುಸ್ಥಾಪಿಸುವುದು ಪ್ರತಿವಾದಿಗಳಿಗೆ ಅವಶ್ಯಕವಾಗಿರುತ್ತದೆ. ಲೆಕ್ಕಕ್ಕೆ ತೆಗೆದುಕೊಳ್ಳದಂಥ ಅಥವಾ ಅನಧಿಕೃತವಾಗಿ ಹೊಂದಾಣಿಕೆ ಮಾಡಲಾಗಿದೆಯೆಂಬ ಸಂದಾಯಗಳನ್ನು ಮುಂಗಡವಾಗಿ ಮಾಡಲಾಗಿದೆಯೆಂಬ ವಾದವನ್ನು ಲಿಖಿತ ಹೇಳಿಕೆಯಲ್ಲಿ ಮಾಡಿರುವುದಿಲ್ಲ. ಹೊಣೆಗಾರಿಕೆಯ ನಿರಾಕರಣೆಯನ್ನು ಹೊರತುಪಡಿಸಿದಂತೆ, ಅಂಥ ಯಾವುದೇ ಮೂಲಾಧಾರ ಇರುವುದಿಲ್ಲ. ಆದ್ದರಿಂದ, ಅಂಥ ಹೆಚ್ಚುವರಿ ಸಾಕ್ಷ್ಯವನ್ನು

ಅನುಮತಿಸಬಹುದಾದಂಥವುಗಳ ಮೇಲಿನ ಆಧಾರಗಳನ್ನು ಬೆಂಬಲಿಸಲು ಅಪೀಲುದಾರನು ಕಾರಣಗಳನ್ನು ವಹಿಸದ ಹೊರತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 27ನೇ ನಿಯಮದ XLI ಕ್ರಮಾದೇಶದಡಿಯಲ್ಲಿ, ಹೆಚ್ಚುವರಿ ಸಾಕ್ಷ್ಯವನ್ನು ಹಾಜರುಪಡಿಸಲು ಕೋರುವ ಮೂಲಕ ತನ್ನ ವಾದವನ್ನು ಸುಧಾರಿಸಲು ಅಪೀಲುದಾರನು ಕೋರುವುದು ಅನುಮತೀಯವಾಗಿರುವುದಿಲ್ಲ. ಅಪೀಲುದಾರನನ್ನು ಇಂಥ ಯಾವುದೇ ಹೆಚ್ಚುವರಿ ಸಾಕ್ಷ್ಯವನ್ನು ಮುಂದಿಡುವುದರಿಂದ ಪ್ರತಿವಾರಿಸಲಾಗಿರುತ್ತದೆ. ಅಂಥ ವಸ್ತು ವಿಷಯವು ಲಭ್ಯವಾಗಿರುವುದಿಲ್ಲ ಅಥವಾ ಅಧಿವಿಚಾರಣೆಯ ಮಿತಿಯಲ್ಲಿ ಇರುವುದಿಲ್ಲವೆಂಬುದು ಅಪೀಲುದಾರರ ವಾದವಾಗಿರುವುದಿಲ್ಲ. ಆದ್ದರಿಂದ, ಅಂಥ ಪ್ರತಿವಾದದ ಯಾವುದೇ ಸುಧಾರಣೆಯನ್ನು ಈ ಹಂತದಲ್ಲಿ ಅನುಮತಿಸಲಾಗುವುದಿಲ್ಲ ಹಾಗು ಅಧಿವಿಚಾರಣಾ ನ್ಯಾಯಾಲಯವು, ಸಕಾರಣಯುತ ತೀರ್ಪು ಹಾಗು ವಸ್ತುನಿಷ್ಟ ಸಾಕ್ಷ್ಯದ ಆಧಾರದ ಮೇಲೆ ದೋಷವಿರದಂಥ ತನ್ನ ತೀರ್ಮಾನಕ್ಕೆ ಬಂದಿರುತ್ತವೆಂದೂ ನಿವೇದಿಸಿಕೊಳ್ಳಲಾಗಿರುತ್ತದೆ. ಆದ್ದರಿಂದ ಅಪೀಲು ದೋಷಪೂರ್ಣವಾಗಿದ್ದು, ಇದನ್ನು ವಜಾಗೊಳಿಸಲು ಕೋರಲಾಗಿರುತ್ತದೆ.

7. ಮೇಲಿನ ವಾದಗಳ ಹಿನ್ನಲೆಯಲ್ಲಿ, ದಾಖಲೆಯನ್ನು ಪರಿಶೀಲಿಸಿದ ಮೇಲೆ ವಾದಪತ್ರವು, ವಾದಿ ಹಾಗು ಪ್ರತಿವಾದಿ ಸಂ.2 ಹಾಗು 3ರ ನಡುವಿನ ವ್ಯವಹರಣೆಗಳಲ್ಲಿ ಬರಬೇಕಾದ ಬಾಕಿ ಮೊಬಲಗಿನ ಸಂಬಂಧದಲ್ಲಿ ಸೂಕ್ತ ಕಾಲಾವಧಿಯನ್ನು ಮೀರಿ ಪ್ರತಿವಾದಿ ಸಂ.1 ಮಾಡಿದ ಸಂದಾಯಗಳಿಗೆ ಯಾವುದೇ ದೃಢೋಕ್ತಿಗಳನ್ನು ಹೊಂದಿರುವುದಿಲ್ಲವೆಂಬುದು ವಾಸ್ತವಾಂಶವಾಗಿರುತ್ತದೆ. ಆದಾಗ್ಯೂ, ವಾದಿಯು ಮಾಡಿದ ಯಾವುದೇ ಸಂದಾಯಗಳಿಗೆ ಲೆಕ್ಕ ಕೊಡಬೇಕಾಗಿರುತ್ತದೆಂಬ ವಾದಕ್ಕೆ ಆಧಾರವಾಗಿ ನಿಶಾನೆ ಪಿ.125 ರಿಂದ 139 ಗಳನ್ನು ಹಾಜರುಪಡಿಸಲು ಪ್ರತಿವಾದಿಗಳು ಕೋರಿರುವುದರಿಂದ ಸೂಚನೆ ನೀಡದೆ ಪ್ರಕಟಿಸಬೇಕೆಂದು ಕೋರಲಾಗಿರುತ್ತದೆ. ಒಪ್ಪಿಕೊಂಡಂತೆ, ಪ್ರತಿವಾದಿ ಸಂ.1ರ ಲೆಕ್ಕಕ್ಕೆ ಸ್ವಲ್ಪ ಮೊಬಲಗನ್ನು ವಿನಿಯೋಗಿಸುವುದರ ಜೊತೆಗೆ 2ನೇ ಹಾಗು 3ನೇ ಪ್ರತಿವಾದಿಗಳು ಲೆಕ್ಕಗಳಿಗೆ ಸಂಬಂಧಿಸಿದಂತೆ ಸಮುಚಿತ ಮೊಬಲಗನ್ನು ವಾದಿ ಅಥವಾ ಆತನ ಏಜೆಂಟ್‌ಗೆ ಪ್ರತಿವಾದಿ ಸಂ.1

ರವರು ಒದಗಿಸಿದ್ದಾರೆಂಬುದಕ್ಕೆ ಯಾವುದೇ ಅಧಿಕೃತತೆಯುಳ್ಳ ಲಿಖಿತ ದಾಖಲೆಯಿರುವುದಿಲ್ಲ. ಪ್ರತಿವಾದಿ ಸಂ.2 ಹಾಗು 3ರ ಲೆಕ್ಕ ಪತ್ರಗಳಿಗೆ ಸಮುಚಿತವಾದಂಥ ಮೊಬಲಗನ್ನು, ಪ್ರತಿವಾದಿ ಸಂ.1ರ ಬದ್ಧತೆಯ ನಿರ್ವಹಣೆಯಂತೆ ಲೆಕ್ಕಕ್ಕೆ ತೆಗೆದುಕೊಂಡಲ್ಲಿ, ಪ್ರತಿವಾದಿ ಸಂ.1ರ ಬದ್ಧತೆಯು ಇಲ್ಲದಂತಾಗುತ್ತದೆ. ಅಧಿವಿಚಾರಣಾ ನ್ಯಾಯಾಲಯವು ಇಂಥ ಒಂದು ಸಂದರ್ಭವನ್ನು ಪರಿಗಣಿಸಿಯೇ ಇರುವುದಿಲ್ಲ.

8. ಪ್ರತಿವಾದಿ ಸಂ.1 ವಜಾಗೊಳಿಸುವ ಕ್ಲೇಮನ್ನು ಅಥವಾ ಪ್ರತಿ ಕ್ಲೇಮನ್ನು ಸಲ್ಲಿಸಿರುವುದಿಲ್ಲವೆಂಬ ಕಟ್ಟುನಿಟ್ಟಿನ ಆಕ್ಷೇಪಣೆ ಕುರಿತಂತೆ ನಾವು ಎಚ್ಚರದಿಂದಿದ್ದೇವೆ. ವಿಷಯದ ಈ ಆಯಾಮವು, ಗಂಭೀರ ಸ್ವರೂಪದ್ದಾಗಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 6ನೇ ನಿಯಮದ VIII ಕ್ರಮಾದೇಶದಡಿಯಲ್ಲಿ, ಪ್ರತಿವಾದಿಯನ್ನು, ಮೊದಲ ಸುನಾವಣೆಯಲ್ಲಿ ವಜಾಗೊಳಿಸಲು ವಾದಿಸುವುದಕ್ಕೆ ಅಗತ್ಯ ಪಡಿಸಿದ್ದಾಗ್ಯೂ, ನಂತರದ ಹಂತಗಳಲ್ಲಿ ಸಹ ಹಾಗೆ ಮಾಡಲು ನ್ಯಾಯಾಲಯವು ಅನುಮತಿಸಬಹುದೆಂದೂ ಸೂಚಿಸಲಾಗಿರುತ್ತದೆಂಬುದು ಕಂಡುಬರುತ್ತದೆ. ಆದ್ದರಿಂದ, ವಜಾಗೊಳಿಸುವುದರಿಂದ ಉದ್ಭವವಾಗಬೇಕಾದ ಆಜ್ಞಾಪಕವು ವಾದಕ್ಕೆ ಸಂಬಂಧಿಸಿದಂತೆ ನಮ್ಯವಾಗಿರುತ್ತದೆ. ಇದು ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಶ್ರೀವತ್ಸರವರು ಒತ್ತು ನೀಡಿದಂಥ ಕಾಲ ಪರಿಮಿತಿಯನ್ನು ಅನ್ವಯಿಸುವ ಕಾಠಿಣ್ಯವನ್ನು ಹೊಂದಿರುವುದಿಲ್ಲ.

9. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಧಿವಿಚಾರಣಾ ನ್ಯಾಯಾಲಯದ ಎದುರು ವಾದಿಸಬಹುದಾದ ರಕ್ಷಣೆಯಲ್ಲಿನ ರೀತಿ ಅಥವಾ ಪರಿಮಿತಿಯ ನಿಷೇಧದ ಔಪಚಾರಿಕತೆ ಅಥವಾ ತಾಂತ್ರಿಕತೆ ಕುರಿತಂತೆ ಒಂದು ನಿಲುವಿಗೆ ಗಮನವನ್ನು ಅಗತ್ಯಪಡಿಸುವಂಥ ಹಾಗು ರಕ್ಷಣೆಯ ವ್ಯವಸ್ಥೆಯನ್ನು ಸುಸ್ಥಾಪಿಸುವಂಥ ಸಂದರ್ಭಗಳೊಂದಿಗೆ ಈ ನ್ಯಾಯಾಲಯವು ಪ್ರಭಾವಕ್ಕೊಳಗಾದಾಗ, ನ್ಯಾಯೋಚಿತ ನ್ಯಾಯನಿರ್ಣಯವನ್ನು ಪಡೆಯುವುದರಿಂದ ಪ್ರತಿವಾದಿಗಳನ್ನು ಹಿಂದೆ ಸರಿಸುವಂತಿಲ್ಲ. ನ್ಯಾಯನಿರ್ಣಯದ ಎಲ್ಲಾ ಉದ್ದೇಶಗಳನ್ನು ಪೂರೈಸಿದ ತರುವಾಯ ಸತ್ಯವು

ಗೋಚರಿಸುತ್ತದೆ. ಅಧಿವಿಚಾರಣಾ ನ್ಯಾಯಾಲಯುವು ಸಮ್ಮತಿಯೊಂದಿಗೆ ಹೊರಡಿಸಿರುವಂಥ ಮೇಲೆ ಪ್ರಸ್ತಾಪಿಸಲಾದಂಥ ಸಂದರ್ಭಗಳಿರುವೆಡೆಗಳಲ್ಲಿ ಅದರಲ್ಲೂ ವಿಶೇಷವಾಗಿ ಒಬ್ಬರ ಕೆಡುಕಿಗೆ ಕಾರಣವಾದ ಹಾಗು ಇತರರ ಕಾನೂನು ಬಾಹಿರ ಸಂಪಾದನೆಯಾಗಿರ ಬಹುದಾದಂಥ ಹೆಚ್ಚಿನ ಮೊಬಲಗನ್ನು ಒಳಗೊಂಡಾಗ ಸದರಿ, ಆಯಾಮವನ್ನು ಕುರಿತಂತೆ ವಾದಮಾಡುವುದನ್ನು ಪಕ್ಷಕಾರರು ಸಂಪೂರ್ಣವಾಗಿ ತಡೆದಿರುತ್ತಾರೆಂಬುದು ಸಮುಚಿತವಾದುದಾಗಿರುತ್ತದೆ. ಅಪೀಲುದಾರನು ಸೂಕ್ತ ಸಮಯದಲ್ಲಿ ವಸ್ತು–ವಿಷಯವನ್ನು ಹಾಜರುಪಡಿಸಿರುತ್ತಾನೆಂಬ ಆಧಾರದ ಮೇಲೆ ವಿಫಲವಾಗಬಹುದಾಗಿದ್ದಾಗ್ಯೂ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸಲು ಕೋರಿರುತ್ತಾರೆಂಬುದು ವಾಸ್ತವಾಂಶವಾಗಿದ್ದರೂ, ಹಾಗೆ ಮಾಡದಿರುವುದರಿಂದ, ಈಗಲೂ ಈ ನ್ಯಾಯಾಲಯಕ್ಕೆ, ವಿಷಯದ ಸತ್ಯಾಂಶವನ್ನು ತಿಳಿಯಲು ಸಾಕ್ಷ್ಯವು ಅವಶ್ಯಕವೆಂದು, ಅಲ್ಲದೆ, ಅದು, ಸಿವಿಲ್ ಪ್ರಕ್ರಿಯಾ ಸಂಹಿತೆಯ 27ನೇ ನಿಯಮದ XLI ಕ್ರಮಾದೇಶದಡಿಯಲ್ಲಿ ವಿವರಿಸಲಾದಂತೆ ಅನುಮತೀಯವಾಗಿರುತ್ತದೆಂದೂ ಅಭಿಪ್ರಾಯಪಡಲು ಅವಕಾಶವಿರುತ್ತದೆ. ವಿಷಯದ ಹಿನ್ನಲೆಯಲ್ಲಿ, ಪ್ರತಿವಾದಿ ಸಂ.1 ಇಲ್ಲಿನ ಅಪೀಲುದಾರರನ್ನು ವಾದ–ಪ್ರತಿವಾದ ಪತ್ರಗಳ ತಿದ್ದುಪಡಿ ಮಾಡಲು ಅವಶ್ಯಕತೆಯಿಲ್ಲದಿದ್ದರೂ ಕೂಡ ವಜಾಗೊಳಿಸುವಂತೆ ವಾದಿಸಲು ಅನುಮತಿಸಬೇಕಾಗಿದ್ದು, ಪುನರ್ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸುವ ಕುರಿತಂತೆ ನ್ಯಾಯಾಲಯವನ್ನು ಸಂಭೋದಿಸಬಹುದಾಗಿರುತ್ತದೆ. ವಾದಿಗೆ ಆಯ್ಕೆ ಮಾಡಿಕೊಳ್ಳ ಬಹುದಾದಂತೆ ರಕ್ಷಣೆಗೆ ಪ್ರತಿಯಾಗಿ ಹಾಗು ಅಂಥ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸಲು ಮುಕ್ತ ಅವಕಾಶವನ್ನು ನೀಡತಕ್ಕದೆಂಬುದೂ ಸಹ ಸ್ಪಷ್ಟವಾಗಿರುವಾಗ, ಐ.ಎ.ಸಂ.1/2017ಕ್ಕೆ ಅವಲಂಬನೆಯ ಮೂಲಕ ದಾಖಲೆ ಮೇಲೆ ತರಬೇಕೆಂದು ಕೋರುವಂಥ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸಲು ಅಪೀಲುದಾರರಿಗೂ ಸಹ ಅನುಮತಿ ನೀಡಬೇಕಾಗಿರುತ್ತದೆ.

10. ತದನುಸಾರವಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಹಾಗು ಡಿಕ್ರಿಯನ್ನು ರದ್ದುಪಡಿಸಲಾಗಿರುತ್ತದೆ. ವಿಷಯವನ್ನು ಈಗಾಗಲೇ ದಾಖಲೆಯ ಮೇಲಿರುವ ಸಾಕ್ಷ್ಯಕ್ಕೆ ಪೂರಕವಾಗಿ ಹೊಸ ಅಧಿವಿಚಾರಣೆಗೆ ಮರು ವಿಚಾರಣೆಗಾಗಿ

ಹಿಂದಕ್ಕೆ ಕಳುಹಿಸಲಾಗಿರುತ್ತದೆ. ಅಧೀನ ನ್ಯಾಯಾಲಯವು ವಿಷಯವನ್ನು ಕುರಿತಂತೆ ತನ್ನ ವಿವೇಚನಾನುಸಾರ ಹಾಗು ಕಾನೂನಿಗನುಸಾರವಾಗಿ ವ್ಯವಹರಿಸತಕ್ಕದ್ದು. ಅಲ್ಲದೆ, 2 ಹಾಗು 3ನೇ ಪ್ರತಿವಾದಿಗಳು ಅಧಿವಿಚಾರಣೆಯಲ್ಲಿ ಭಾಗವಹಿಸಿರುವುದಿಲ್ಲ ಹಾಗು ದಾವೆಯನ್ನು 2 ಹಾಗೂ 3ನೇ ಪ್ರತಿವಾದಿಗಳಿಗೆ ವಿರುದ್ಧವಾಗಿ ವಜಾಗೊಳಿಸಲಾಗಿರುತ್ತದೆ. ಇದು ಕೊನೆಯ ಹಂತದಲ್ಲಿದ್ದರೂ ವಾದ–ಪ್ರತಿವಾದಗಳನ್ನು ಸೇರಿಸಲು ಸದರಿ ಪ್ರತಿವಾದಿಗಳು ಹಾಗು ವಾದಿಗಳಿಗೆ ಸಂಬಂಧಿಸಿದಂತೆ ನಿರ್ವಹಿಸಲಾದ ಅವರ ಹೊಣೆಗಾರಿಕೆಗಳು ಹಾಗು ಹೊಂದಾಣಿಕೆಗಳಿಗೆ ಹೆಚ್ಚಿನ ಸಾಕ್ಷ್ಯಗಳ ಮೂಲಕ ಸುಸ್ಥಾಪಿಸಲು ಮುಕ್ತರಾಗಿರುತ್ತಾರೆ.

11. ದಾವೆಯು 2012ನೇ ವರ್ಷದ್ದೆಂಬ ವಾಸ್ತವಾಂಶದ ಹಿನ್ನಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವನ್ನು ಹೆಚ್ಚುವರಿ ವ್ಯವಹರಣೆಗಳನ್ನು ತ್ವರಿತಗೊಳಿಸಲು ಹಾಗು ಶೀಘ್ರವಾಗಿ ಸಾಧ್ಯವಾಗದಿದ್ದಲ್ಲಿ ದಾಖಲೆಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಇದನ್ನು ಪೂರ್ಣಗೊಳಿಸಲು ಕೋರಲಾಗಿರುತ್ತದೆ.

12. ರಿಜಿಸ್ಟ್ರಿಗೆ ಅಧಿವಿಚಾರಣಾ ನ್ಯಾಯಾಲಯಕ್ಕೆ ದಾಖಲೆಗಳನ್ನು ಈ ಕೂಡಲೇ ಕಳುಹಿಸಲು ನಿರ್ದೇಶಿಸಲಾಗಿರುತ್ತದೆ. ಈ ತೀರ್ಪನ್ನು ಹಿಂದಕ್ಕೆ ಕಳುಹಿಸುತ್ತಿರುವ ಹಿನ್ನಲೆಯಲ್ಲಿ, ನ್ಯಾಯಾಲಯ ಶುಲ್ಕದ ಶೇ.50 ರಷ್ಟನ್ನು ಮೆ॥ ಎಂ.ಕೆ.ಆರ್. ಪೌಲ್ಟ್ರಿ ಫಾರಂಗೆ ಸಂದಾಯ ಮಾಡಬೇಕು ಹಾಗು ಒದಗಿಸಲಾದ ಬ್ಯಾಂಕ್ ಖಾತರಿಯನ್ನು ರದ್ದುಪಡಿಸತಕ್ಕದ್ದು ಹಾಗು ವಿಮೋಚನೆಗೊಳಿಸತಕ್ಕದ್ದು.

---